# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **2040** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **25.03.2026** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪಶುಸಂಗೋಪನೆ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಗೋಶಾಲೆಗಳು/ ಗೋಸಂಕುಲ ಸಂರಕ್ಷಣೆ ಕೇಂದ್ರಗಳ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿಲ್ಲವೆಂಬ ಸಾರ್ವಜನಿಕ ದೂರಿನ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; ರಾಜ್ಯದಲ್ಲಿ ಪ್ರಸ್ತುತ ಎಷ್ಟು ಸರ್ಕಾರಿ ಗೋಶಾಲೆಗಳು ಕಾರ್ಯನಿರ್ವಹಿಸುತ್ತಿವೆ; ಪ್ರತಿ ಗೋಶಾಲೆಯ ಅನುಮೋದಿತ ಸಾಮರ್ಥ್ಯ (Capacity) ಮತ್ತು ಪ್ರಸ್ತುತ ಇರುವ ಪಶುಗಳ ಸಂಖ್ಯೆ ಎಷ್ಟು; | ಸರ್ಕಾರಿ ಗೋಶಾಲೆಗಳು ಸಮರ್ಪಕವಾಗಿ ನಡೆಯುತ್ತಿಲ್ಲವೆಂಬ ಸಾರ್ವಜನಿಕ ದೂರುಗಳು ವರದಿಯಾಗಿರುವುದಿಲ್ಲ.<br><br>ಪ್ರಸ್ತುತ 45 ಸರಕಾರಿ ಗೋಶಾಲೆಗಳು ಕಾರ್ಯನಿರ್ವಹಿಸುತ್ತಿವೆ. 23 ಸರ್ಕಾರಿ ಗೋಶಾಲೆಗಳಲ್ಲಿ ಜಾನುವಾರುಗಳನ್ನು ನಿರ್ವಹಿಸಲಾಗುತ್ತಿದೆ. 13 ಗೋಶಾಲೆಗಳಲ್ಲಿ ಜಾನುವಾರುಗಳು ಸೇರ್ಪಡೆಯಾಗಿರುವುದಿಲ್ಲ, 9 ಗೋಶಾಲೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ.<br><br>ಈ ಗೋಶಾಲೆಗಳಲ್ಲಿ ಜಾನುವಾರುಗಳನ್ನು ನಿರ್ವಹಿಸುವ ಸಾಮರ್ಥ್ಯ (Capacity) ಮತ್ತು ಪ್ರಸ್ತುತ ಇರುವ ಜಾನುವಾರುಗಳ ಸಂಖ್ಯೆಯ ವಿವರವನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ. |
| ಆ) | ಗೋಶಾಲೆಗಳ ನಿರ್ವಹಣೆಗೆ ವರ್ಷವಾರು ಅನುದಾನ ಎಷ್ಟು ಮಂಜೂರಾಗಿದೆ; ಕಳೆದ ಮೂರು ವರ್ಷಗಳಲ್ಲಿ ಅನುದಾನ ಬಿಡುಗಡೆ ಮತ್ತು ಖರ್ಚಿನ ವಿವರವನ್ನು (ಆಹಾರ, ಔಷಧಿ, ಸಿಬ್ಬಂದಿ ವೇತನ, ಮೂಲಸೌಕರ್ಯ, ನಿರ್ವಹಣೆ) ಜಿಲ್ಲಾವಾರು ನೀಡುವುದು; | ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಗೋಶಾಲೆಗಳ ನಿರ್ವಹಣೆಗೆ ಅನುದಾನ ಬಿಡುಗಡೆ ಮತ್ತು ಖರ್ಚಿನ ಅನುದಾನದ ಜಿಲ್ಲಾವಾರು ವಿವರವನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ. |
| ಇ) | ಪ್ರತಿ ಪಶುವಿಗೆ ದಿನಸಿ ಆಹಾರ ಮಾನದಂಡ ಹಾಗೂ ಪೌಷ್ಟಿಕಾಂಶ ಪ್ರಮಾಣವನ್ನು ನಿಗದಿಪಡಿಸಿರುವ ಸರ್ಕಾರದ ಮಾರ್ಗಸೂಚಿಗಳು ಯಾವುವು; ಅವುಗಳ ಅನುಷ್ಠಾನವನ್ನು ಪರಿಶೀಲಿಸಲು ಯಾವುದೇ ತಾಂತ್ರಿಕ ತಪಾಸಣೆ (Technical Audit/Veterinary Inspection) ವ್ಯವಸ್ಥೆ ಇದೆಯೇ; | NDRF Norms ಪ್ರಕಾರ ಪ್ರತಿ ಜಾನುವಾರುವಿಗೆ ಪ್ರತಿ ದಿನಕ್ಕೆ ರೂ.80/- ನಿರ್ವಹಣಾ ವೆಚ್ಚ ನಿಗದಿಪಡಿಸಲಾಗಿದೆ. ಇದರಲ್ಲಿ ಮೇವು/ ಪೌಷ್ಠಿಕ ಆಹಾರ, ನೀರು ಸರಬರಾಜು ಮತ್ತು ಔಷಧಿಗಳನ್ನು ಒಳಗೊಂಡಿರುತ್ತದೆ.<br><br>ಅವುಗಳ ಅನುಷ್ಠಾನವನ್ನು ಪರಿಶೀಲಿಸಲು ಮತ್ತು ತಾಂತ್ರಿಕ ತಪಾಸಣೆ ಕೈಗೊಳ್ಳಲು ಈ ಮುಂದಿನಂತೆ ಗೋಶಾಲೆ ನಿರ್ವಹಣಾ ಸಮಿತಿಯನ್ನು ರಚಿಸಲಾಗಿದೆ. |

<table>
<tr>
<td></td>
<td></td>
<td>

**ಗೋಶಾಲೆ ನಿರ್ವಹಣೆ ಸಮಿತಿ**

<table>
<tr><td>1</td><td>ಜಿಲ್ಲಾ ಉಪ ನಿರ್ದೇಶಕರು (ಆಡಳಿತ)</td><td>ಅಧ್ಯಕ್ಷರು</td></tr>
<tr><td>2</td><td>ಆಯಾ ತಾಲ್ಲೂಕು ಮುಖ್ಯ ಪಶುವೈದ್ಯಾಧಿಕಾರಿಗಳು(ಆಡಳಿತ)</td><td>ಸದಸ್ಯರು</td></tr>
<tr><td>3</td><td>ಗೋಶಾಲೆ ವ್ಯಾಪ್ತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ (PDO)</td><td>ಸದಸ್ಯರು</td></tr>
<tr><td>4</td><td>ಗೋಶಾಲೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಸಗಿ ಗೋಶಾಲೆಯ ಒಬ್ಬ ಪ್ರತಿನಿಧಿ</td><td>ಸದಸ್ಯರು</td></tr>
<tr><td>5</td><td>ಜಿಲ್ಲಾ ಪ್ರಾಣಿ ದಯಾ ಸಂಘದಿಂದ ಒಬ್ಬ ಪ್ರತಿನಿಧಿ</td><td>ಸದಸ್ಯರು</td></tr>
<tr><td>6</td><td>ಗೋಶಾಲೆಯ ಪ್ರಭಾರಾಧಿಕಾರಿಗಳು</td><td>ಸದಸ್ಯ ಕಾರ್ಯದರ್ಶಿ</td></tr>
</table>

ಸಾಮಾನ್ಯವಾಗಿ ಸರ್ಕಾರಿ ಗೋಶಾಲೆಗಳಲ್ಲಿ ನಿರ್ಗತಿಕ, ವಯಸ್ಸಾದ, ಅನಾರೋಗ್ಯ ಪೀಡಿತ, ಬೀಡಾಡಿ ಜಾನುವಾರುಗಳು ಸೇರ್ಪಡೆಯಾಗುತ್ತವೆ. ಇಂತಹ ಜಾನುವಾರುಗಳು ಜೀವಿಸುವುದಕ್ಕೆ ಬೇಕಾಗುವಷ್ಟು ಆಹಾರವನ್ನು ನೀಡಲಾಗುತ್ತದೆ.

</td>
</tr>
<tr>
<td>ಈ)</td>
<td>ಗೋಶಾಲೆಗಳಲ್ಲಿ ನಿಯಮಿತ ಆರೋಗ್ಯ ತಪಾಸಣೆ, ಲಸಿಕಾ ಕಾರ್ಯಕ್ರಮ (Vaccination Schedule), ರೋಗ ನಿಯಂತ್ರಣ ಕ್ರಮಗಳು ಮತ್ತು ಪಶುವೈದ್ಯರ ನೇಮಕಾತಿ ಬಗ್ಗೆ ನಿಗದಿತ ಮಾನದಂಡಗಳನ್ನು ಪಾಲಿಸಲಾಗುತ್ತಿದೆಯೇ;<br>ಇಲಾಖೆಯಲ್ಲಿ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು;</td>
<td>

ಗೋಶಾಲೆ ವ್ಯಾಪ್ತಿಯ ಪಶುವೈದ್ಯಕೀಯ ಸಂಸ್ಥೆಯ ಮುಖಾಂತರ ಗೋಶಾಲೆಯಲ್ಲಿರುವ ಜಾನುವಾರುಗಳ ನಿಯಮಿತ ಆರೋಗ್ಯ ತಪಾಸಣೆ, ಲಸಿಕಾ ಕಾರ್ಯಕ್ರಮ (Vaccination Schedule), ರೋಗ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಕಾರ್ಯನಿರ್ಹಿಸುತ್ತಿರುವ ಗೋಶಾಲೆಯ ತಾಲ್ಲೂಕಿನ, ಪಶು ಆಸ್ಪತ್ರೆಯ ಸಹಾಯಕ ನಿರ್ದೇಶಕರನ್ನು ಗೋಶಾಲೆಯ ಮೇಲುಸ್ತುವಾರಿ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ಪ್ರಸ್ತುತ ಇಲಾಖೆಯಲ್ಲಿ ಮಂಜೂರು ಭರ್ತಿ ಹಾಗೂ ಖಾಲಿ ಹುದ್ದೆಗಳ ವಿವರ ಕೆಳಕಂಡಂತಿದೆ.

<table>
<tr><td>ಮಂಜೂರು</td><td>ಭರ್ತಿ</td><td>ಗುತ್ತಿಗೆ/ ಹೊರ ಗುತ್ತಿಗೆ ಮೇಲೆ ಭರ್ತಿ</td><td>ಖಾಲಿ</td></tr>
<tr><td>18508</td><td>7143</td><td>4291</td><td>7074</td></tr>
</table>

</td>
</tr>
</table>

| | | |
|---|---|---|
| ಉ) | ರಾಜ್ಯದಲ್ಲಿನ ಸರ್ಕಾರಿ ಗೋಶಾಲೆಗಳ ಸಮರ್ಪಕ, ಪಾರದರ್ಶಕ ಮತ್ತು ವೈಜ್ಞಾನಿಕ ನಿರ್ವಹಣೆಯನ್ನು ಖಚಿತಪಡಿಸಲು ಸರ್ಕಾರವು ಕೈಗೊಳ್ಳಲು ಉದ್ದೇಶಿಸಿರುವ ಸಮಗ್ರ ಸುಧಾರಣಾ ಕ್ರಮಗಳು ಯಾವುವು? | ರಾಜ್ಯದ ಸರ್ಕಾರಿ ಗೋಶಾಲೆಗಳ ಸಮರ್ಪಕ, ಪಾರದರ್ಶಕ ಮತ್ತು ವೈಜ್ಞಾನಿಕ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br>1) ಗೋಶಾಲೆಗಳ ದೈನಂದಿನ ಚಟಿವಟಿಕೆಗಳು ಸುಗಮವಾಗಿ ನಿರ್ವಹಿಸಲು ಅವಶ್ಯವಿರುವ ಯಾವುದೇ ಹೆಚ್ಚುವರಿ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಪ್ರಾಣಿ ದಯಾ ಸಂಘ ಸಂಪೂರ್ಣ ಅಧಿಕಾರ ಹೊಂದಿರುತ್ತದೆ.<br>2) ಗೋಶಾಲೆ ನಿರ್ವಹಣೆ ಸಮಿತಿಯು ಪ್ರತಿ ಮಾಹೆ ಸಭೆ ಸೇರಿ ಗೋಶಾಲೆಯಲ್ಲಿ ಜಾನುವಾರುಗಳ ದಾಖಲಾತಿ ಮತ್ತು ನಿರ್ವಹಣೆ ಸಂಬಂಧ ಪ್ರಗತಿ ಪರಿಶೀಲನೆಯನ್ನು ನಡೆಸುವುದು ಮತ್ತು ಗೋಶಾಲೆಯನ್ನು ಉತ್ತಮವಾಗಿ ನಿರ್ವಹಿಸುವ ಸಂಬಂಧ ಸಮಿತಿಯು ಸೂಕ್ತ ಸಲಹೆಗಳನ್ನು ನೀಡಿ, ನಿರ್ಧಾರಗಳನ್ನು ತೆಗೆದುಕೊಂಡು ಜಿಲ್ಲಾ ಪ್ರಾಣಿ ದಯಾ ಸಂಘಕ್ಕೆ ವರದಿ ಸಲ್ಲಿಸುವುದು.<br>3) ಗೋಶಾಲೆಯ ಅವಶ್ಯಕತೆಗನುಗುಣವಾಗಿ ಗೋಶಾಲೆ ನಿರ್ವಹಣೆಗೆ ಸಂಬಂಧಿಸಿದಂತೆ ಆವರ್ತಕ ವೆಚ್ಚಗಳಾದ ಒಣ ಮೇವು, ಪಶು ಆಹಾರ, ಕರುಗಳ ಪಾಲನೆಗಾಗಿ ಹಾಲು ಹಾಗೂ ಚಿಕಿತ್ಸೆಗಾಗಿ ಅವಶ್ಯವಿರುವ ಔಷಧಿ-ರಾಸಾಯನಿಕಗಳು, ಇನ್ನಿತರೆ ದೈನಂದಿನ ಇತರೆ ಸಣ್ಣ ಪುಟ್ಟ ದುರಸ್ತಿಗಳು /ನಿರ್ವಹಣಾ ವೆಚ್ಚಗಳ ಬಗ್ಗೆ ಸಮಿತಿಯು ಪರಿಶೀಲಿಸುವುದು. |

**ಸಂಖ್ಯೆ:ಪಸಂಮೀ 103 ಸಲೆವಿ 2026**

ಕೆ. ವೆಂಕಟೇಶ್

**(ಕೆ. ವೆಂಕಟೇಶ್)**

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

ಅನುಬಂಧ-1

## ಸರ್ಕಾರಿ ಗೋಶಾಲೆಗಳಲ್ಲಿ ಜಾನುವಾರುಗಳ ನಿರ್ವಹಣೆ ಸಾಮರ್ಥ್ಯ ಮತ್ತು ಪ್ರಸ್ತುತ ಇರುವ ಜಾನುವಾರುಗಳ ಸಂಖ್ಯೆಯ ವಿವರ

| ಕ್ರ. ಸಂ | ಜಿಲ್ಲೆ | | ಗೋಶಾಲೆ ವಿಳಾಸ | ಸಾಮರ್ಥ್ಯ | ಜಾನುವಾರುಗಳ ಸಂಖ್ಯೆ |
|---|---|---|---|---|---|
| 1 | ಮಂಗಳೂರು | 1 | ಸರ್ಕಾರಿ ಗೋಶಾಲೆ ರಾಮಕುಂಜ ಗ್ರಾಮ, ಕಡಬ ತಾ. | 150 | 154 |
| 2 | ಕೊಡಗು | 2 | ಸರ್ಕಾರಿ ಗೋಶಾಲೆ ಕೆ.ನಿಡುಗಣೆ | 50 | 36 |
| 3 | ತುಮಕೂರು | 3 | ಸರ್ಕಾರಿ ಗೋಶಾಲೆ ಹುಲಿಕುಂಟೆ ಹೋಬಳಿ ಚಿಕ್ಕಬಾಣಗೆರೆ | 50 | 66 |
| 4 | ಬಾಗಲಕೋಟೆ | 4 | ಬೀಳಗಿ ತಾ: ಬೂದಿಹಾಳ ಎಸ್. ಹೆಚ್ | 100 | 34 |
| | | 5 | ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರ, ಹುನಗುಂದ ತಾಲ್ಲೂಕು | 50 | 25 |
| 5 | ಬೆಂಗಳೂರು ಗ್ರಾಮಾಂತರ | 6 | ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು, ಹೋಬಳಿ, ಕೊಡಿಗೇಹಳ್ಳಿ | 100 | 31 |
| 6 | ಬೆಳಗಾವಿ | 7 | ಬೆಳವಿ,ಗ್ರಾಮ ಹುಕ್ಕೇರಿ ಗ್ರಾಮ | 100 | 39 |
| 7 | ಚಿಕ್ಕಬಳ್ಳಾಪುರ | 8 | ನಾಗಿರೆಡ್ಡಿಹಳ್ಳಿ ಶಿಡ್ಲಘಟ್ಟ ತಾ: | 50 | 51 |
| 8 | ದಾವಣಗೆರೆ | 9 | ಹೊಸಹಳ್ಳಿ ಗ್ರಾಮ ದಾವಣಗೆರೆ ತಾ: | 50 | 21 |
| 9 | ಧಾರವಾಡ | 10 | ಮದನಬಾವಿ, ಧಾರವಾಡ ತಾ: | 60 | 148 |
| 10 | ಗದಗ | 11 | ನಾಗವಿ ಗ್ರಾಮ ಗದಗ ಜಿಲ್ಲೆ | 50 | 15 |
| 11 | ಮೈಸೂರು | 12 | ಆಯರಹಳ್ಳಿ, ವರುಣ ಹೋಬಳಿ | 200 | 25 |
| 12 | ಬೆಂಗಳೂರು ನಗರ | 13 | ಜಿಗಣಿ ಸರ್ಕಾರಿ ಗೋಶಾಲೆ ಆನೇಕಲ್ ತಾ: | 100 | 82 |
| 13 | ಉಡುಪಿ | 14 | ಕೆರೆಬೆಟ್ಟು ಗ್ರಾಮ, ಹೆಬ್ರಿ ತಾ: | 65 | 62 |
| 14 | ಉತ್ತರ ಕನ್ನಡ | 15 | ದುಸಗಿ ಗ್ರಾಮ, ಹಳಿಯಾಳ ತಾಲ್ಲೂಕು | 100 | 183 |
| 15 | ವಿಜಯನಗರ | 16 | ವಿಜಯ ನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ, ತಾಲುಕು, ವರ್ಲಹಳ್ಳಿ ಗ್ರಾಮ | 100 | 36 |
| 16 | ವಿಜಯಪುರ | 17 | ವಿಜಯಪುರ ತಾಲುಕು ಬುರಣಾಪೂರ ಗ್ರಾಮ | 50 | 50 |
| 17 | ಹಾವೇರಿ | 18 | ಗುತ್ತಲ ಕುರಿ ಸಂವರ್ದನಾ ಕೇಂದ್ರ | 100 | 84 |
| 18 | ಚಿತ್ರದುರ್ಗ | 19 | ಕುರಡಿಹಳ್ಳಿ ಗ್ರಾಮ, ಕಸಬಾ ಹೋಬಳಿ, ಚೆಳ್ಳಕೆರೆ ತಾಲ್ಲೂಕು | 100 | 89 |
| 19 | ಚಿಕ್ಕಮಗಳೂರು | 20 | ಕಡೂರು ತಾಲ್ಲೂಕು, ಎಮ್ಮೆದೊಡ್ಡಿ | 100 | 28 |
| 20 | ಹಾಸನ | 21 | ಸಿದ್ದಾಪುರ ಗ್ರಾಮ, ಬೇಲೂರು ತಾಲ್ಲೂಕು, | 70 | 187 |
| 21 | ಚಾಮರಾಜನಗರ | 22 | ಬರಗಿ ಗ್ರಾಮ ಗುಂಡ್ಲು ಪೇಟೆ ತಾಲ್ಲೂಕು | 200 | 53 |
| 22 | ಕೋಲಾರ | 23 | ವೆಂಕಟಾಪುರ ಮಜರೆ ಗುಟ್ಟಹಳ್ಳಿ ಗ್ರಾಮ | 100 | 59 |
| | | | ಒಟ್ಟು | 2095 | 1558 |

ಚು.ಗು.ಪ್ರ.ಸಂ. 2040

ಅನುಬಂಧ-2

| ಕ್ರ. ಸಂ | ಜಿಲ್ಲೆಯ ಹೆಸರು | 2022-23 | | 2023-24 | | 2024-25 | |
|---|---|---|---|---|---|---|---|
| | | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು |
| 1 | ಬೆಳಗಾವಿ | 0.00 | 0.00 | 5.00 | 5.00 | 7.00 | 7.00 |
| 2 | ಬಾಗಲಕೋಟೆ | 0.00 | 0.00 | 5.00 | 5.00 | 0.00 | 0.00 |
| 3 | ವಿಜಯಪುರ | 0.00 | 0.00 | 5.00 | 5.00 | 4.00 | 4.00 |
| 4 | ಬೀದರ್ | 0.00 | 0.00 | 5.00 | 5.00 | 0.00 | 0.00 |
| 5 | ರಾಯಚೂರು | 0.00 | 0.00 | 5.00 | 0.00 | 0.00 | 0.00 |
| 6 | ಕೊಪ್ಪಳ | 0.00 | 0.00 | 5.00 | 0.00 | 0.00 | 0.00 |
| 7 | ಗದಗ | 0.00 | 0.00 | 5.00 | 0.00 | 0.00 | 0.00 |
| 8 | ಧಾರವಾಡ | 0.00 | 0.00 | 5.00 | 5.00 | 12.00 | 12.00 |
| 9 | ಉತ್ತರಕನ್ನಡ | 0.00 | 0.00 | 5.00 | 5.00 | 25.30 | 25.30 |
| 10 | ಹಾವೇರಿ | 0.00 | 0.00 | 5.00 | 5.00 | 0.00 | 0.00 |
| 11 | ಚಿತ್ರದುರ್ಗ | 0.00 | 0.00 | 45.31 | 45.31 | 11.28 | 11.28 |
| 12 | ದಾವಣಗೆರೆ | 10.00 | 10.00 | 5.00 | 5.00 | 6.50 | 6.50 |
| 13 | ಶಿವಮೊಗ್ಗ | 0.00 | 0.00 | 5.00 | 5.00 | 0.00 | 0.00 |
| 14 | ಉಡುಪಿ | 0.00 | 0.00 | 5.00 | 5.00 | 9.10 | 9.10 |
| 15 | ಚಿಕ್ಕಮಗಳೂರು | 0.00 | 0.00 | 5.00 | 5.00 | 0.00 | 0.00 |
| 16 | ತುಮಕೂರು | 2.37 | 2.37 | 15.51 | 15.51 | 16.20 | 16.20 |
| 17 | ಬೆಂಗಳೂರು ನಗರ | 0.00 | 0.00 | 22.51 | 22.51 | 17.30 | 17.30 |
| 18 | ಮಂಡ್ಯ | 0.00 | 0.00 | 5.00 | 5.00 | 0.00 | 0.00 |
| 19 | ಹಾಸನ | 10.00 | 10.00 | 80.26 | 80.26 | 23.00 | 23.00 |
| 20 | ದಕ್ಷಿಣಕನ್ನಡ | 5.00 | 5.00 | 15.51 | 15.51 | 20.20 | 20.20 |
| 21 | ಕೊಡಗು | 0.00 | 0.00 | 5.00 | 5.00 | 0.00 | 0.00 |
| 22 | ಮೈಸೂರು | 0.00 | 0.00 | 15.86 | 15.86 | 6.50 | 6.50 |
| 23 | ಚಾಮರಾಜನಗರ | 0.00 | 0.00 | 6.93 | 6.93 | 11.50 | 11.50 |
| 24 | ಕಲುಬುರಗಿ | 0.00 | 0.00 | 5.00 | 5.00 | 0.00 | 0.00 |
| 25 | ಯಾದಗಿರಿ | 0.00 | 0.00 | 5.00 | 0.00 | 0.00 | 0.00 |
| 26 | ಕೋಲಾರ | 0.00 | 0.00 | 5.00 | 5.00 | 12.00 | 12.00 |
| 27 | ಚಿಕ್ಕಬಳ್ಳಾಪುರ | 0.00 | 0.00 | 5.00 | 0.00 | 0.00 | 0.00 |
| 28 | ಬೆಂಗಳೂರು ಗ್ರಾಮಾಂತರ | 5.00 | 5.00 | 15.00 | 15.00 | 8.00 | 8.00 |
| 29 | ರಾಮನಗರ | 0.00 | 0.00 | 5.00 | 0.00 | 0.00 | 0.00 |
| 30 | ವಿಜಯನಗರ | 0.00 | 0.00 | 5.00 | 5.00 | 6.21 | 6.21 |
| | ಒಟ್ಟು | 32.37 | 32.37 | 326.89 | 296.89 | 196.09 | 196.09 |

ನಿರ್ದೇಶಕರು.